ಇ) *ವಿದ್ಯುತ್ ಕೊರತೆಯನ್ನು ನೀಗಲು ಸರ್ಕಾರದ ಮುಂದಿರುವ ತಾತ್ಕಾಲಿಕ ಹಾಗೂ ಖಾಯಂ ಕಾರ್ಯಕ್ರಮಗಳೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು);

ಅ) ರಾಜ್ಯದಲ್ಲಿ 1990-91ನೇ ಸಾಲಿನಲ್ಲಿ ವಿವಿಧ ವರ್ಗದ ಗ್ರಾಹಕರುಗಳಿಂದ ಬೇಕಾಗಿರುವ ಅನಿರ್ಬಂಧಿತ ವಿದ್ಯುತ್ತಿನ ಪ್ರಮಾಣದ ಅಂದಾಜು ಈ ಕೆಳಕಂಡಂತೆ ದಿನಪ್ರತಿ 56 ದಶಲಕ್ಷ ಯೂನಿಟುಗಳು.

1) ಕೈಗಾರಿಕೆಗಳು- ಸರಾಸರಿ ದಿನಂಪ್ರತಿ 26 ದಶಲಕ್ಷ ಯೂನಿಟ್‌ಗಳು.

2) ಕೃಷಿ ಬಳಕೆದಾರರು-ಸರಾಸರಿ ದಿನಂಪ್ರತಿ -15 ಲಕ್ಷ ಯೂನಿಟ್‌ಗಳು.

3) ಮಿಕ್ಕ ಉಳಿದ ವರ್ಗದ ಗ್ರಾಹಕರುಗಳಿಂದ -ಸರಾಸರಿ ದಿನಂಪ್ರತಿ -15 ದಶಲಕ್ಷ ಯೂನಿಟ್‌ಗಳು.

ಆ) 1990-91ನೇ ಸಾಲಿನಲ್ಲಿ ರಾಜ್ಯದಲ್ಲಿನ ವಿವಿಧ ಯೋಜನೆಗಳಿಂದ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳಿಂದ ಸರಬರಾಜಾಗುತ್ತಿರುವ ವಿದ್ಯುತ್ತಿನ ಪ್ರಮಾಣ ಸರಾಸರಿ ದಿನಂಪ್ರತಿ 46 ದಶಲಕ್ಷ ಯೂನಿಟುಗಳು.

ಇ) ಕರ್ನಾಟಕ ವಿದ್ಯುತ್ ನಿಗಮವು ಈಗಾಗಲೇ ಕಾರ್ಯಗತವಾಗಿರುವ 6 ಯೋಜನೆಗಳಲ್ಲದೆ 8ನೇ ಯೋಜನೆಯ ಅವಧಿಯಲ್ಲಿ ಇನ್ನೂ 6 ಯೋಜನೆಗಳನ್ನು ಕೈಗೆತ್ತಿಗೊಳ್ಳಲು ಯೋಜಿಸಿದೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಯಲಹಂಕದಲ್ಲಿ ಒಂದು ಡೀಜಲ್ ಜನರೇಟರ್ ಕೇಂದ್ರವನ್ನು ಸ್ಥಾಪಿಸಿದೆ.

ಭಾರತ ಸಂದರ್ಶನ ವರ್ಷದಲ್ಲಿ ಕರ್ನಾಟಕ ರಾಜ್ಯ ಕೈಗೊಳ್ಳಲಿರುವ ವಿಶೇಷ ಪ್ರವಾಸೋದ್ಯಮ ಕಾರ್ಯಕ್ರಮ

1116 - ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) - ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1991ರ ಭಾರತ ಸಂದರ್ಶನ ವರ್ಷದಲ್ಲಿ ಕರ್ನಾಟಕ ರಾಜ್ಯ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ವಿಶೇಷ ಪ್ರವಾಸೋದ್ಯಮ ಉತ್ತೇಜಕ ಕಾರ್ಯಕ್ರಮಗಳೇನು?*

ಆ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಳ್ಳಲಿರುವ ಕಾರ್ಯಕ್ರಮಗಳೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

1. ಈಗಾಗಲೇ ಕೈಗೊಂಡಿರುವ ಹೆದ್ದಾರಿ ಸೌಲಭ್ಯಗಳು ಮತ್ತಿತರ ವಸತಿ ಸೌಕರ್ಯ, ಕಟ್ಟಡಗಳನ್ನು ಸಜ್ಜುಗೊಳಿಸಲಾಗುವುದು.

2. ಮೈಸೂರು ದಸರಾ, ಹಂಪಿ ಮತ್ತು ಬಿಜಾಪುರದಲ್ಲಿ ಸಾಂಸ್ಕೃತಿಕ ಉತ್ಸವವನ್ನು ಹೆಚ್ಚಿನ ಪ್ರಮಾಣದಲ್ಲಿ ಹಾಗೂ ಹೊಸದಾಗಿ ಕರಾವಳಿಯಲ್ಲಿ ಕರಾವಳಿಯ ಉತ್ಸವ ಆಚರಿಸುವುದು.

3. ವಿವಿಧ ಮಾಧ್ಯಮಗಳ ಮೂಲಕ ಪ್ರಚಾರ ಕಾರ್ಯವನ್ನು ತ್ವರಿತಗೊಳಿಸಲಾಗುವುದು.

4. ನಿಯೋಜಿತ ಪ್ರವಾಸಿಗರಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು 5 ಹೊಸ ಬಸ್ಸುಗಳನ್ನು ಖರೀದಿಸಿ ಆ ಅವಧಿಯಲ್ಲಿ ಪ್ರವಾಸಿಗರಿಗಾಗಿ ಉಪಯೋಗಿಸುವುದು.

ಆ) ಕರಾವಳಿ ತೀರದ ಬಗ್ಗೆ ವಿಡಿಯೋ ಫಿಲಂ ಒಂದನ್ನು ಪ್ರವಾಸೋದ್ಯಮ ಇಲಾಖೆಯು ತಯಾರಿಸುತ್ತಿದೆ.

ಅ) ಭಾರತ ಸಂದರ್ಶನ ವರ್ಷದಡಿ ಕರಾವಳಿ ಉತ್ಸವವನ್ನು ಆಚರಿಸಲು ತೀರ್ಮಾನಿಸಿದೆ.

ಹೊನ್ನಾವರ ಸಮೀಪ ಶರಾವತಿ ನದಿಯ ಸೇತುವೆ ಅಪಾಯಕಾರಿಯಾಗಿರುವುದರ ಬಗ್ಗೆ

993 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಸಮೀಪ ಶರಾವತಿ ನದಿಯ ಸೇತುವೆ ಅಪಾಯಕಾರಿಯಾಗಿದ್ದು, ಸರ್ಕಾರ ಬದಲಿ ಸೇತುವೆ ನಿರ್ಮಾಣಕ್ಕೆ ಕ್ರಮ ಕೈಗೊಂಡಿದೆಯೆ?

ಆ) ಮೇಲ್ಕಂಡ ಸೇತುವೆ ಸಂಚಾರ ಯೋಗ್ಯವಾಗಿಲ್ಲವೆಂದು ತಜ್ಞರು ವರದಿ ಮಾಡಿರುವುದು ನಿಜವೇ?

ಇ) ಶರಾವತಿ ಸೇತುವೆ ಮೇಲೆ ವಾಹನ ನಿಯಂತ್ರಣಕ್ಕಾಗಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಈ ವಿಷಯವು ಕೇಂದ್ರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಇಲ್ಲ.

ಕೇಂದ್ರ ಸಾರಿಗೆ ಸಚಿವಾಲಯದ ಮತ್ತು ಲೋಕೋಪಯೋಗಿ ಇಲಾಖೆಯ ಹಿರಿಯ ಅಧಿಕಾರಿಗಳು ಇದನ್ನು ಪರಿವೀಕ್ಷಿಸಿ ಸೇತುವೆಯ ಮೇಲೆ ಭಾರಿ ವಾಹನಗಳನ್ನು ವೇಗ ಮತ್ತು ತೂಕ ಮಿತಿಯೊಂದಿಗೆ ಬಿಡಲಾಗುತ್ತಿದೆ.

ಇ)ಈ ಸೇತುವೆಯ ಮೇಲೆ ದಿನಾಂಕ; 7-3-1991 ರಿಂದ ಭಾರಿ ವಾಹನಗಳ ಸಂಚಾರವನ್ನು ಮಾತ್ರ ನಿಲ್ಲಿಸಲಾಗಿದ್ದು, ಕಾರು,ಲಾರಿ ಮುಂತಾದ ಸಣ್ಣ ವಾಹನಗಳ ಸಂಚಾರವು ಎಂದಿನಂತೆ ನಡೆಯುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಕ್ಷೇತ್ರದಲ್ಲಿ ಅನೇಕ ಕಡೆ ಸಮುದ್ರ ಕೊರೆತ

978 - ಶ್ರೀ ಜಿ. ಎಸ್. ಆಚಾರ್ (ಬೈಂದೂರು) : ಮಾನ್ಯ ಮುಖ್ಯಮಂತ್ರಿಗಳಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಜಿಲ್ಲೆಯ ಬೈಂದೂರು ಕ್ಷೇತ್ರದಲ್ಲಿ ಅನೇಕ ಕಡೆ ಸಮುದ್ರ ಕೊರೆತ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆಯವ್ಯಯ ಪಟ್ಟಿಯಲ್ಲಿ ನಮೂದಿಸಿರುವ ಕಾಮಗಾರಿಗಳು ಕಾರ್ಯಾರಂಭವಾಗದಿರಲು ಕಾರಣವೇನು?

ಇ) ಹಾಗಿದ್ದಲ್ಲಿ ಆ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಬಂದಿದೆ.

ಆ) ಕಾಮಗಾರಿಗಳಿಗೆ ತಾಂತ್ರಿಕ ಪರಿಣಿತ ಸಮಿತಿಯ ಮಂಜೂರಾತಿ ಪಡೆಯಬೇಕಾಗಿದ್ದು ಮಂಜೂರಾತಿ ಪಡೆದ ನಂತರ ಅನುದಾನದ ಲಭ್ಯತೆ ಮೇರೆಗೆ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಶ್ರೀ ಬಸವೇಶ್ವರ ಐಕ್ಯ ಸ್ಥಳವಾದ ಕೂಡಲ ಸಂಗಮ ಪ್ರದೇಶದ ಅಭಿವೃದ್ಧಿ